ಇಂಗ್ಲಿಷ್ ಮೂಲ: ಉಷಾ ರಾಜಗೋಪಾಲನ್
**ಕನ್ನಡಕ್ಕೆ: ಸಹನಾ ಹೆಗಡೆ**

# ಸ್ವಾತಂತ್ರ್ಯ ಸೇನಾನಿ



ಇದು ಕಾನೂನುಬಾಹಿರ. ಆದರೇನು? ಇದು ಬಿಹಾರ. ಒಂದಿಷ್ಟು ಹೊತ್ತು ಕಾದಿದ್ದರೆ, ರೈಲು ಆಗಲೇ ತುಂಬಿಹೋಗಿದೆ ಎಂದು ಸೀಟನ್ನು ಮುಂಗಡ ಕಾಯ್ದಿರಿಸುವ ಗುಮಾಸ್ತ. ಹೇಳಿಬಿಟ್ಟಿದ್ದರೂ ಯಾರಾದರೂ ದೃಢೀಕೃತ ಟಿಕೆಟ್ಟನ್ನು ಕೊಟ್ಟೇ ಇರುತ್ತಿದ್ದರು.

'ದಿಲ್ಲಿ, ಮೇಮ್‌ಸಾಬ್?' ಹದಿಹರೆಯದ ದಲ್ಲಾಳಿ ಹುಡುಗ ರೈಲ್ವೇ ನಿಲ್ದಾಣದಲ್ಲಿದ್ದ ಇತರ ಯಾವುದೇ ಜನರಂತೆ ಸಾಮಾನ್ಯನಾಗಿದ್ದ.

'ಹೌದು.'

'ಥರ್ಡ್ ಏ ಸಿ?'

'ಹೌದು.'

'ಫಿಫ್ಟೀನ್ ಫಿಫ್ಟಿ.'

'ಫಿಫ್ಟೀನ್ ಫಿಫ್ಟೀ? ಆದರೆ ಟಿಕೆಟ್ಟಿನ ಬೆಲೆ ಕೇವಲ ಹದಿಮೂರು ನೂರು.'

'ಅರ್ಧ ತಿನ್ನುವುದಕ್ಕೆ. ಅಲ್ವಾ ಮೇಮ್‌ಸಾಬ್?'

ನನಗೆ ಮಾರನೆಯ ದಿನ ಬೆಳಿಗ್ಗೆ ದಿಲ್ಲಿಯಲ್ಲಿ ಇರಲೇಬೇಕಿತ್ತು.

'ಇರು,' ಹೇಳಿದವನೇ ಆತ ನನ್ನ ಹಣದೊಂದಿಗೆ ಮಾಯವಾದ.

ಹಳಿಯುದ್ದಕ್ಕೂ ನಿರುಕಿಸುತ್ತ ಸಾಮಾನು ಸರಂಜಾಮುಗಳನ್ನು ಎತ್ತಿಕೊಂಡಿತು ಕದಡಿದ ಜನಸಂದಣಿ. ಧಡಧಡಾರೆಂದು ಶಬ್ದ ಮಾಡುತ್ತ ಕುಲುಕಾಡುತ್ತ ರೈಲೇನೋ ಬಂದಿತು. ಆದರೆ ಬಿರುಗಾಳಿಯಂತೆ ಹೋದ ಆ ಹುಡುಗನೆಲ್ಲಿ? ತುದಿಗಾಲಿನಲ್ಲಿ ನಿಂತು ತಲೆಗಳ ಗುಂಪಿನಲ್ಲಿ ಅವನಿಗಾಗಿ ಹುಡುಕಾಡತೊಡಗಿದೆ.

'ಇವರೊಂದಿಗೆ ಹೋಗಿ,' ತಟಕ್ಕನೇ ಹಿಂದಿನಿಂದ ಕೇಳಿಬಂದಿತು ಅವನ ಸ್ವರ.

ಬಿಳಿ ಕುರ್ತಾ ಹಾಗೂ ಪಂಚೆ ಧರಿಸಿದ್ದ ಆ 'ಇವರು' ಎನ್ನುವ ಕೃಶಕಾಯದ ವೃದ್ಧ 'ಬೇಗ' ಎನ್ನುತ್ತ ಹೊರಟೇ ಬಿಟ್ಟರು.

ಅವರ ಸಣಕಲು ಶರೀರ, ಪ್ರಯಾಣಿಕರು ಅವರ ಮಿತ್ರರು ಹಾಗೂ ಸಂಬಂಧಿಕರ ನಡುವೆ ಅಭ್ಯಾಸವಾಗಿಬಿಟ್ಟಿದೆಯೆಂಬಂತೆ ಸರಾಗವಾಗಿ